

ತನಗೊಬ್ಬ ಸುಂದರಿಯನ್ನು ಕರುಣಿಸುವಂತೆ ಆತ ದೇವರನ್ನು ಕುರಿತು ತಪಸ್ಸು ಮಾಡಿದ. ಪ್ರತ್ಯಕ್ಷನಾದ ದೇವ 'ನೀನು ಹಿಂದೂವಾದರೆ ಕರೀನಾ, ಮುಸ್ಲಿಂ ಆದರೆ ಸಾನಿಯಾ, ಕ್ರೈಸ್ತನಾದರೆ ಜೆನಿಲಿಯಾಳನ್ನು ಕೊಡುತ್ತೇನೆ; ನಿನ್ನ ಹೆಸರೇನು?' ಎಂದು ಪ್ರಶ್ನಿಸಿದ.

ಕ್ಷಣಾರ್ಧದಲ್ಲಿ ಉತ್ತರ ಬಂತು– 'ಅಬ್ದುಲ್ ನಾರಾಯಣ ಫರ್ನಾಂಡಿಸ್!'

★★★

ಗೆಳತಿಯೊಂದಿಗೆ ನೋವು ತೋಡಿಕೊಳ್ಳುತ್ತಿದ್ದಳಾಕೆ.

'ಸ್ಪೈಡರ್ ಮ್ಯಾನ್‌ಗೆ ಹಂಬಲಿಸಿದೆ, ಸೂಪರ್ ಮ್ಯಾನ್‌ಗೆ ಇಷ್ಟಪಟ್ಟೆ, ಕಡೆಗೊಬ್ಬ ಜಂಟಲ್‌ಮ್ಯಾನ್ ಆದರೂ ಸಿಗಲಿ ಅಂದುಕೊಂಡಿದ್ದೆ.'

'ಏನಾಯಿತು?'

ವಾಚ್‌ಮನ್ ಸಿಕ್ಕ!'

ಸಂಗ್ರಹ: ವಾ. ಮುರಳೀಧರ ತೀರ್ಥಹಳ್ಳಿ



ಡಾಕ್ಟರ್: ನಿಮ್ಮ ಹೆಂಡತಿಗೆ ಯಾವುದೇ ತೊಂದರೆ ಇಲ್ಲ... ವಯಸ್ಸಾಗುತ್ತಿದೆ ನೋಡಿ..! ಅದಕ್ಕೆ ಕಿವಿ ಸ್ವಲ್ಪ ಮಂದಾಗಿದೆ ಅಷ್ಟೇ... ಅಂತಾ ಅವರಿಗೆ ಹೇಳಿ..

ಪತಿ: (ಹೆದರುತ್ತಾ) 'ನೀವೇ ಹೇಗಾದರೂ ಮಾಡಿ ಅವಳಿಗೆ ಹೇಳಿಬಿಡಿ ಡಾಕ್ಟ್ರೇ..'

★★★

ಸಾಕ್ಷಿ ಹೇಳಲು 'ಐಟಂ ಸಾಂಗ್ ನಟಿ' ಕಟಕಟೆಯಲ್ಲಿ ನಿಂತಿದ್ದಳು. ಬಾಗಿ ವಕೀಲರ ಕಿವಿಯಲ್ಲಿ ಪಿಸುಗುಟ್ಟಿದಳು; 'ಇಲ್ಲಿ ನಾನು ಎಲ್ಲವನ್ನೂ ಬಹಿರಂಗ ಪಡಿಸಬೇಕಾ ಹೇಗೆ?'

ಲಾಯರ್: 'ಅಯ್ಯೋ ಮೊದ್ಲು ನಿಮ್ಮ ಸೆರಗು ಸರಿಪಡಿಸಿಕೊಳ್ಳಿ..! ನಂತರ ನಾನು ಕೇಳುವ ಪ್ರಶ್ನೆಗಳಿಗೆ ಉತ್ತರಿಸಿ ಸಾಕು..!



★★★

'ನಮ್ಮ ಆಸ್ತಿ ಹಂಚಿಕೆಯ ವಿಷಯ ತುಂಬ ಜಟಿಲವಾಗುತ್ತಿದೆ ಮಾರಾಯ..!'

'ಯಾರಾದರೂ ನುರಿತ ವಕೀಲರನ್ನು ನೇಮಿಸಿಕೊಳ್ಳಬೇಕಿತ್ತು'

'ನುರಿತ ವಕೀಲರನ್ನು ನೇಮಿಸಿಕೊಂಡ ಮೇಲೆಯೇ ವಿಷಯ ಜಟಿಲವಾಗಿರೋದು...!'

ಸಂಗ್ರಹ: ಜೆ.ವಿಜಯ್ ಕುಮಾರ್, ಹರಪನಹಳ್ಳಿ

ಸಂತಾ: ಆ ಹುಡುಗಿ ಕಿವುಡಿಯೆಂದು ನನಗನ್ನಿಸುತ್ತದೆ.

ಬಂತಾ: ನಿನಗೇಕೆ ಹಾಗನ್ನಿಸುತ್ತದೆ?

ಸಂತಾ: ಏಕೆಂದರೆ... 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದವಳಿಗೆ ಹೇಳಿದರೆ ಅವಳು, 'ನನ್ನಲ್ಲಿ ಹೊಚ್ಚ ಹೊಸಾ ಚಪ್ಪಲಿಗಳಿವೆ' ಎಂದು ಉತ್ತರಿಸುತ್ತಾಳೆ?!

★★★

ಟೀಚರ್: ಏನನ್ನೂ ಕೇಳಿಸಿಕೊಳ್ಳಲಾಗದವರನ್ನು ಏನೆಂದು ಕರೆಯುತ್ತಾರೆ?

ಗೋಪಿ: ಅವರನ್ನು ನಾವು ಹೇಗೆ ಬೇಕಾದರೂ ಕರೆಯಬಹುದು. ಏಕೆಂದರೆ ಅವರಿಗೇನೂ ಕೇಳಿಸುವುದಿಲ್ಲ ತಾನೆ?!

ಸಂತಾನ ಮಗ: ಅಪ್ಪಾ, ನಿಮಗೆ ರಸ್ತೆಯ ಮೇಲೆ ರೂಪಾಯಿ 10 ಮತ್ತು ರೂಪಾಯಿ 5ರ ನೋಟುಗಳು ಕಾಣಿಸಿಕೊಂಡರೆ ನೀವು ಯಾವ ನೋಟನ್ನು ಎತ್ತಿಕೊಳ್ಳುವಿರಿ?

ಸಂತಾ: 10 ರೂಪಾಯಿಯ ನೋಟನ್ನು ಎತ್ತಿ ಕೊಳ್ಳುವೆ.

ಸಂತಾನ ಮಗ: ಅದಕ್ಕೇ... ಜನರು ನಿಮ್ಮ ಮೇಲೆ ಜೋಕುಗಳನ್ನು ರಚಿಸುತ್ತಿದ್ದಾರೆ... ಇಲ್ಲದಿದ್ದರೆ, ಎರಡೂ ನೋಟುಗಳನ್ನು ನೀವು ಎತ್ತಿಕೊಳ್ಳುವುದಿಲ್ಲವೆ?!

ಸಂಗ್ರಹ: ರಮಣ ಶೆಟ್ಟಿ, ರೆಂಜಾಳ್